ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**
**PAPER CLIPPINGS**

12

ಇಲಾಖೆ / ವಿಷಯ : DEPARTMENT / SUBJECT: ______

ಪತ್ರಿಕೆಯ ಹೆಸರು : NAME OF THE NEWS PAPER: ______ ದಿನಾಂಕ : DATE : 5/1/21

# ಪರಿಷತ್ ಗದ್ದಲ ತನಿಖೆಗೆ ಸದನ ಸಮಿತಿ

5/1/21

**ಸಂ.ಕ.ಸಮಾಚಾರ ಬೆಂಗಳೂರು**

ವಿಧಾನ ಪರಿಷತ್‌ನಲ್ಲಿ ಡಿಸೆಂಬರ್ 15ರಂದು ಒಂದು ದಿನದ ವಿಶೇಷ ಅಧಿವೇಶನದ ವೇಳೆ ನಡೆದ ಅಹಿತಕರ ಘಟನೆ ಸಂಬಂಧ ಕಾರಣರಾದ ಸದನದ ಸದಸ್ಯರು ಹಾಗೂ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲು ಐವರು ಸದಸ್ಯರ ಸಮಿತಿಯನ್ನು ವಿಧಾನ ಪರಿಷತ್ ಸಭಾಪತಿ ಕೆ.ಪ್ರತಾಪ್‌ಚಂದ್ರ ಶೆಟ್ಟಿ ರಚಿಸಿದ್ದಾರೆ.



ಸಭಾಪತಿಗಳ ಆದೇಶದ ಅನುಸಾರ ಪರಿಷತ್ ಕಾರ್ಯದರ್ಶಿ ಕೆ.ಆರ್.ಮಹಾ ಲಕ್ಷ್ಮಿ ಈ ಕುರಿತು ಆದೇಶ ಹೊರಡಿಸಿದ್ದಾರೆ. ಜೆಡಿಎಸ್‌ನ ಹಿರಿಯ ಸದಸ್ಯ ಮರಿತಿಬ್ಬೇಗೌಡ ಸಮಿತಿಯ ಅಧ್ಯಕ್ಷರಾಗಿದ್ದು, ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್, ಆರ್.ಬಿ. ತಿಮ್ಮಾಪುರ, ಬಿಜೆಪಿಯ ಅಡಗೂರು ಎಚ್. ವಿಶ್ವನಾಥ್ ಹಾಗೂ ಎಸ್.ವಿ.ಸಂಕನೂರ ಸದಸ್ಯರಾಗಿದ್ದಾರೆ.

ಹಿಂದೆ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 2010ರ ಜುಲೈ 9 ಮತ್ತು ಅಕ್ಟೋಬರ್ 11ರಂದು ನಡೆದಿದ್ದ ಅಹಿತಕರ ಘಟನಾವಳಿಗಳನ್ನು ಆಧರಿಸಿ ಅಂದಿನ ಸ್ಪೀಕರ್ ಸದನ ಸಮಿತಿ ರಚಿಸಿದ್ದನ್ನು ಪರಿಗಣಿಸಿ ಹಾಗೂ ವಿಧಾನ ಪರಿಷತ್‌ನ ಕಾರ್ಯವಿಧಾನ ಹಾಗೂ ನಡುವಳಿಕೆಯ ನಿಯಮ 331 ಹಾಗೂ 342ರಡಿಯಲ್ಲಿ ಈ ಸಮಿತಿ ರಚಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಡಿಸೆಂಬರ್ 15ರಂದು ಪರಿಷತ್‌ನಲ್ಲಿ ನಡೆದ ಕಾನೂನುಬಾಹಿರ ವರ್ತನೆಯ ಅಂಶಗಳ ಪರಿಶೀಲನೆ, ಘಟನೆಗೆ ಕಾರಣರಾದ ಪರಿಷತ್ ಸಚಿವಾಲಯದ ಅಧಿಕಾರಿಗಳು, ಸಿಬ್ಬಂದಿ, ಸದಸನ ಸದಸ್ಯರು, ಸಚಿವರು ಹಾಗೂ ಇತತರ ಬಗ್ಗೆ ಪರಿಶೀಲಿಸುವುದು, ಘಟನೆ ಸಂಬಂಧ ಕಾಂಗ್ರೆಸ್ ಮತ್ತು ಬಿಜೆಪಿ ಶಾಸಕರು ಸಭಾಪತಿಗಳಿಗೆ ನೀಡಿರುವ ದೂರು, ಮನವಿಗಳ ಪರಿಶೀಲನೆ, ವಿಧಾನ ಪರಿಷತ್ ಕಾರ್ಯದರ್ಶಿಗಳಿಗೆ ಸಭಾಪತಿ ನೀಡಿರುವ ಶೋಕಾಸ್ ನೋಟಿಸ್ ಮತ್ತು ಅದರ ಉತ್ತರ ಪರಿಶೀಲನೆ ಹಾಗೂ ಸಮಿತಿಗೆ ಸೂಕ್ತವೆನಿಸುವ ಅಂದಿನ ಘಟನೆಗೆ ಸಂಬಂಧಿಸಿದ ಹಾಗೂ ಘಟನೆ ನಡೆದ ದಿನಾಂಕದಿಂದ ಸಮಿತಿ ರಚನೆ ಆಗುವವರೆಗೆ ಪೀಠ ಮತ್ತು ಸದನದ ಗೌರವಕ್ಕೆ ಚ್ಯುತಿ ತರುವಂತಹ ಇತರ ಪೂರಕ ಅಂಶಗಳ ಬಗೆಗೆ ಪರಿಶೀಲಿಸುವುದು ಈ ಸಮಿತಿಯ ತನಿಖೆಗೆ ವಹಿಸಲಾಗಿದೆ.